# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 69 | Pages. 2 | Date: 12-02-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 69 - ಪುಟಗಳು : 2 | 12-02-2026 | ಗುರುವಾರ | Ph: 8762954248 | ದರ : ₹1


# ಟಿಕೆಟ್ ಕೈ ತಪ್ಪುವ ಆತಂಕದಲ್ಲಿ ಪ್ರೀತಂ ಗೌಡ

## ಕಾಂಗ್ರೆಸ್‌ನತ್ತ ಮಾಜಿ ಶಾಸಕರ ಚಿತ್ತ | ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಜೆಡಿಎಸ್-ಬಿಜೆಪಿ ಮೈತ್ರಿಯಿಂದ 2028ರ ವಿಧಾನಸಭೆ ಚುನಾವಣೆಯಲ್ಲಿ ತಮಗೆ ಟಿಕೆಟ್ ಸಿಗುವುದಿಲ್ಲವೆಂದು ಹತಾಶೆಗೊಂಡಿರುವ ಮಾಜಿ ಶಾಸಕ ಪ್ರೀತಂ ಗೌಡ ಮೈತ್ರಿ ಕುರಿತು ಅಪಸ್ವರ ಎತ್ತುತ್ತಿದ್ದಾರೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅಭಿಪ್ರಾಯಪಟ್ಟರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಸ್ಥಳೀಯ ಚುನಾವಣೆಯಲ್ಲಿ ಮೈತ್ರಿಗೆ ಅಪಸ್ವರ ಎತ್ತಿರುವ ಪ್ರೀತಂಗೌಡ ಅವರು, ಕಳೆದ ಲೋಕಸಭೆ ಚುನಾವಣೆಯಲ್ಲಿ ಯಾರ ಜೊತೆ ಇದ್ದರು ಎಂಬುದನ್ನು ಬಹಿರಂಗಪಡಿಸಲಿ ಎಂದು ಸವಾಲೆಸೆದರು.

ಮುಂದೆ ಅವರಿಗೆ ಟಿಕೆಟ್ ಸಿಗದಿದ್ದರೆ ಬಿಜೆಪಿಯಲ್ಲಿ ಇರಲ್ಲ, ಈಗಾಗಲೇ ಕಾಂಗ್ರೆಸ್‌ಗೆ ಒಂದು ಕಾಲು ಇಟ್ಟಿದ್ದಾರೆ. 2028ರಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಬೇಕೆಂಬುದು ಅವರ ಅಂತರಂಗ. ಕಾಂಗ್ರೆಸ್‌ನಲ್ಲಿ ಜಾಗ ಮಾಡಿಕೊಳ್ಳಲು, ಅವರ ಆಪ್ತ ಶರತ್ ಎಂಬುವರನ್ನು ಕಾಂಗ್ರೆಸ್‌ಗೆ ಇವರೇ ಕಳಿಸಿದ್ದಾರೆ ಎಂದರು.

ಹಿರಿಯರ ಆಶಯದಂತೆ ಬಿಜೆಪಿ-ಜೆಡಿಎಸ್ ಮೈತ್ರಿ ಇರಲಿದೆ. ಅವರ ಆಶಯದಂತೆ ನಾವು ನಡೆಯುತ್ತೇವೆ. ಕೆಳಹಂತದ ಕಾರ್ಯಕರ್ತರ ವಿಶ್ವಾಸ ಇಲ್ಲದೆ ಕಚ್ಚಾಡುವುದು ಬೇಡ, ನಮಗೆ ತಾಪಂ-ಜಿಪಂ ಚುನಾವಣೆ ಮುಖ್ಯ. ಆವತ್ತಿನ ಪರಿಸ್ಥಿತಿಯ ಬಗ್ಗೆ ಸರ್ವೆ ಮಾಡಿಸಿ ಗೆಲ್ಲುವವರಿಗೆ ಟಿಕೆಟ್ ಕೊಡುತ್ತಾರೆ. ಈ ವಿಚಾರದಲ್ಲಿ ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದರು.

### ಕೇಂದ್ರ ಸಚಿವರಿಗೆ ಧನ್ಯವಾದ

ಇದೇ ವೇಳೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಮಂಡ್ಯ ಜಿಲ್ಲೆಯಲ್ಲಿ ಎಆರ್‌ಐಎ ಕೇಂದ್ರ ತೆರೆಯಲು 500 ಕೋಟಿ ಅನುದಾನ ತರುತ್ತಿರುವುದು ಪರೋಕ್ಷವಾಗಿ ಹಾಸನಕ್ಕೂ ಅನುಕೂಲ ಆಗಲಿದೆ ಎಂದರು.

ಆನೆ ಕಾರಿಡಾರ್ ನಿರ್ಮಾಣದ ಬಗ್ಗೆಯೂ ಮಾತನಾಡಿರುವುದು ಒಳ್ಳೆಯದು. ಹೀಗೆಯೇ ಜಿಲ್ಲೆಗೆ ಹೊಸದಾಗಿ ಕೈಗಾರಿಕಾ ವಲಯ, ಐಟಿ ಹಬ್, ಐಐಟಿ ತರಬೇಕು ಎಂದು ಮನವಿ ಮಾಡಿದರು. ದುದ್ದ ಬಳಿ ಮೇಲ್ಸೇತುವೆ/ಅಂಡರ್‌ಪಾಸ್‌ಗೆ 150 ಕೋಟಿ ರೂ., ಮೊಸಳೆ ಹೊಸಳ್ಳಿ ರೈಲ್ವೆ ನಿಲ್ದಾಣ ನಿರ್ಮಾಣಕ್ಕೆ 120 ಕೋಟಿ ರೂ.ಗೆ ಒಪ್ಪಿಗೆ ಸೂಚಿಸಿರುವ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್, ವಿ.ಸೋಮಣ್ಣ ಅವರಿಗೆ ಧನ್ಯವಾದ ಹೇಳಿದರು.

> ಹೆಚ್.ಡಿ.ಕುಮಾರಸ್ವಾಮಿ ಅವರು ಹಲವು ಯೋಜನೆಗಳನ್ನು ಕರ್ನಾಟಕಕ್ಕೆ ತರಲು ಉತ್ಸುಕರಾಗಿದ್ದಾರೆ. ರಾಜ್ಯ ಸರ್ಕಾರ ಸಹಕಾರ ಕೊಡುತ್ತಿಲ್ಲ. ಭೂಮಿ ಕೊಡುತ್ತಿಲ್ಲ 2-3 ಲಕ್ಷ ಹುದ್ದೆ ಖಾಲಿ ಇದ್ದು, ಭರ್ತಿ ಯಾವಾಗ ಗೊತ್ತಿಲ್ಲ. ಸ್ಥಳಿಯ ಸಂಸ್ಥೆ ಚುನಾವಣೆ ಕಡೆ ಗಮನ ಕೊಡುತ್ತಿಲ್ಲ. ಇದೀಗ ಗ್ರಾಪಂ ಅವಧಿಯೂ ಮುಗಿದು 15ನೇ ಹಣಕಾಸು ಆಯೋಗ ಅನುದಾನ ಸ್ಥಗಿತಗೊಂಡಿದೆ, ಸೋಲುವ ಭಯದಿಂದ ಚುನಾವಣೆ ನಡೆಸುತ್ತಿಲ್ಲವೇ.
>
> **- ಹೆಚ್.ಕೆ.ಕುಮಾರಸ್ವಾಮಿ, ಮಾಜಿ ಶಾಸಕ**

### ಶಿವಲಿಂಗೇಗೌಡರಿಗೆ ಮಂತ್ರಿ ಸ್ಥಾನ ಕೇವಲ ಕನಸು

ಅರಸೀಕೆರೆ ಶಾಸಕ ಶಿವಲಿಂಗೇಗೌಡರ ಸದನದಲ್ಲಿ ನಡೆದುಕೊಂಡ ರೀತಿ ತಲೆ ತಗ್ಗಿಸುವ ವಿಚಾರ. ಶಾಸಕ ಶರಣು ಸಲಗಾರ್ ಪತ್ನಿ ಬಗ್ಗೆ ಲಘುವಾಗಿ ಮಾತನಾಡಬಾರದಿತ್ತು. ಅರಸೀಕೆರೆಯಲ್ಲಿ ಶಿವಲಿಂಗೇಗೌಡರು ಇಲ್ಲದೇ ಇದ್ದಾಗಲೂ ಜೆಡಿಎಸ್ ಗೆದ್ದಿದೆ ಎಂದು ನೆನಪಿಸಿದರು.

ಅವರಿಗೆ ನೀತಿ, ಸಿದ್ಧಾಂತ ಇದ್ದಿದ್ದರೆ, ಕೆಹೆಚ್‌ಬಿ ನಿಗಮ ಮಂಡಳಿ ಸ್ಥಾನವನ್ನು ಬಿಳಿಚೌಡಯ್ಯ ಅವರಿಗೆ ಬಿಟ್ಟುಕೊಟ್ಟು, ತಾವು ಮಂತ್ರಿ ಆಗಬೇಕಿತ್ತು. ಇದಕ್ಕಾಗಿಯೇ ಕಾಂಗ್ರೆಸ್ ಸೇರಿದರು. ಆದರೆ ಅವರಿಗೆ ಮಂತ್ರಿಗಿರಿ ಕನಸಿನ ಮಾತು ಎಂದು ಕೆ.ಎಸ್.ಲಿಂಗೇಶ್ ವ್ಯಂಗ್ಯವಾಡಿದರು.

ಕರ್ನಾಟಕ ವಿಧಾನಸಭೆ ದೇಶದಲ್ಲೇ ಖ್ಯಾತಿ, ಗೌರವ ಪಡೆದಿತ್ತು. ಆದರೆ ಇತ್ತೀಚೆಗೆ ಸದನದ ಸ್ವರೂಪವೇ ಬದಲಾಗಿದೆ. ಸ್ಪೀಕರ್ ಶಿವಲಿಂಗೇಗೌಡರಿಗೆ ಬುದ್ಧಿ ಹೇಳುವ ಬದಲು ನಗುತ್ತಿದ್ದರು. ಇದರು ಬೇಸರ ತರಿಸಿದೆ ಎಂದರು.

ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ ಮಾತನಾಡಿ, ಪ್ರೀತಂ ಗೌಡ ಒಬ್ಬರೇ ಅಲ್ಲ, ನಾವೇನೂ ಮೈತ್ರಿಗೆ ಮೇಲೆ ಬಿದ್ದು ಹೋಗಿಲ್ಲ, ಮೇಲ್ಮಟ್ಟದಲ್ಲಿ ತೀರ್ಮಾನ ಆಗಿದೆ. ಅದಕ್ಕೆ ನಾವು ಬದ್ಧರಾಗಬೇಕೆಂದರು.

ಈ ಚರ್ಚೆ ಆತುರ ಎನಿಸಿದೆ. ಅಂತಿಮವಾಗಿ ಯಾರಿಗೆ ಬಿ ಫಾರಂ ಎಂಬುದನ್ನು ಎರಡೂ ಪಕ್ಷಗಳ ಅಧ್ಯಕ್ಷರು ತೀರ್ಮಾನಿಸುತ್ತಾರಾ ಎಂದು ಟಾಂಗ್ ಕೊಟ್ಟರು. ಆದರೂ ಪ್ರೀತಂಗೌಡ ಮಾತಿನ ಬಗ್ಗೆ ಅವರ ನಾಯಕರು ಹೇಳಬೇಕು, ನಮ್ಮ ಶಕ್ತಿಯನ್ನು ಕಾಲ ಬಂದಾಗ ಹೇಳುತ್ತೇವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ, ಮುಖಂಡರಾದ ರಂಗಶೆಟ್ಟಿ, ಸಮೀರ್ ಇದ್ದರು.

# ಹೆತ್ತೂರಿನಲ್ಲಿ ಹಿರಿಯ ವಿದ್ಯಾರ್ಥಿಗಳಿಂದ ಗುರುವಂದನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಹೆತ್ತೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳಿಂದ ಗುರುವಂದನ ಕಾರ್ಯಕ್ರಮ ಆಯೋಜಿಸಲಾಗಿತ್ತು.

1992ರ ಶೈಕ್ಷಣಿಕ ವರ್ಷದಲ್ಲಿ ಶಾಲೆಗೆ ಒಂದನೇ ತರಗತಿಗೆ ದಾಖಲಾಗಿ 2003ರಲ್ಲಿ ವ್ಯಾಸಂಗ ಮುಗಿಸಿದ ಹಿರಿಯ ವಿದ್ಯಾರ್ಥಿಗಳು ಗುರುವಂದನಾ ಮತ್ತು ಸ್ನೇಹ ಮಿಲನ ಕಾರ್ಯಕ್ರಮ ಆಯೋಜನೆ ಮಾಡಿದ್ದರು.

ಅಕ್ಷರಗಳ ಜೊತೆ ವಿದ್ಯಾರ್ಥಿಗಳ ನಡೆ, ನುಡಿಯನ್ನು ತಿದ್ದಿ - ತೀಡಿ ಜೀವನವನ್ನು ರೂಪಿಸಲು ಮಾರ್ಗದರ್ಶನ ಮಾಡಿದ ಅರಿವಿನ ಗುರುಗಳಿಗೆ ವಿದ್ಯಾರ್ಥಿಗಳು ಪುಷ್ಪಾರ್ಚನೆ ಸಲ್ಲಿಸಿ ಕಾರ್ಯಕ್ರಮಕ್ಕೆ ಬರಮಾಡಿಕೊಂಡರು.

ನಿವೃತ್ತ ಮುಖ್ಯ ಶಿಕ್ಷಕ ಸುರೇಶ್ ಮಾತನಾಡಿ, ಶಾಲೆಯಲ್ಲಿ ಹಿರಿಯ ವಿದ್ಯಾರ್ಥಿಗಳು ಹಮ್ಮಿಕೊಂಡಿರುವ ಗುರುವಂದನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ತುಂಬಾ ಸಂತಸ ತಂದಿದೆ. ಕಲಿಕೆ ನಿರಂತರ ಪ್ರಕ್ರಿಯೆಯಾಗಿದ್ದು ಎಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಮಾಡುವಂತೆ ಮನವಿ ಮಾಡಿದರು.

ಮತ್ತೊಬ್ಬ ಶಿಕ್ಷಕ ವೆಂಕಟೇಶ್ ಮಾತನಾಡಿ, ಶತಮಾನದ ಹೊಸ್ತಿಲಲ್ಲಿರುವ ಹೆತ್ತೂರು ಸರ್ಕಾರಿ ಶಾಲೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣ ಪಡೆದು ತಮ್ಮ ಜೀವನ ರೂಪಿಸಿಕೊಂಡಿದ್ದಾರೆ. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಜೊತೆಗೆ ಅವರಿಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಮಕ್ಕಳು ಸಾಧನೆ ಮಾಡಲು ಪೋಷಕರು ಕೈ ಜೋಡಿಸಬೇಕು ಎಂದು ಕಿವಿ ಮಾತು ಹೇಳಿದರು.

ಶಾಲೆಯ ಶಿಕ್ಷಕರಾದ ಲವ, ಪ್ರಕಾಶ್, ಶಿವೇಗೌಡ, ರಮೇಶ್ ನಾಯಕ್, ಚಂದ್ರಶೇಖರ್, ನಾಗರತ್ನ, ತನುಜಾ, ವಿನೋದ, ಜಯಲಕ್ಷ್ಮಿ, ಭಾಗ್ಯ, ಪಾಪಣ್ಣ, ಹೊನ್ನಮ್ಮ, ವಿಜಯಲಕ್ಷ್ಮಿ, ನಾಗರಾಜು, ರಘು, ಮೋಹನ್ ಕುಮಾರ್, ಪುಟ್ಟಸ್ವಾಮಿ, ಜಗದೀಶ್, ಕೆಪಿಎಸ್ ಶಾಲೆಯ ಪ್ರಾಂಶುಪಾಲ ಮಂಜುನಾಥ್, ಮುಖ್ಯೋಪಾಧ್ಯಾಯ ಸತೀಶ್, ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಹರೀಶ್ ಮತ್ತಿತರರಿದ್ದರು.

# ಕಂದಾಯ ಇಲಾಖೆ ನಿರ್ಲಕ್ಷ್ಯ: ದೂರುಗಳ ಸುರಿಮಳೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಪಟ್ಟಣದ ತಾಲೂಕು ಕಚೇರಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಲೋಕಾಯುಕ್ತ ಕುಂದು ಕೊರತೆ ಸಭೆಯಲ್ಲಿ ಸಾರ್ವಜನಿಕರು ದೂರುಗಳ ಸುರಿಮಳೆಗೈದರು.

ಲೋಕಾಯಯುಕ್ತ ಇನ್ಸಪೆಕ್ಟರ್ ಸಿ.ಎಲ್.ಚಂದ್ರಶೇಖರ್ ಅವರು ಸಾರ್ವಜನಿಕರಿಂದ ಸಮಸ್ಯೆಗಳ ಕುರಿತಾಗಿ ಅರ್ಜಿ ಸ್ವೀಕರಿಸಿದರು.

ಸ್ವೀಕಾರಗೊಂಡ 10 ಅರ್ಜಿಗಳ ಪೈಕಿ 8 ಅರ್ಜಿಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದವು. 2 ಅರ್ಜಿಗಳು ತಾಲ್ಲೂಕು ಪಂಚಾಯಿತಿ ಇಲಾಖೆಗೆ ಸೇರಿದವಾಗಿದ್ದವು. ಅರ್ಜಿ ಹಿಡಿದು ಬಂದ ಸಾರ್ವಜನಿಕರನ್ನು ಕೂರಿಸಿ ಆಗಿರುವ ಸಮಸ್ಯೆಗಳ ಕುರಿತಾಗಿ ಮಾಹಿತಿ ಪಡೆದು ಸ್ಥಳದಲ್ಲೆ ಇದ್ದ ಅಧಿಕಾರಿಗಳಿಂದ ಸಮಸ್ಯೆಯ ಕುರಿತಾಗಿ ಚರ್ಚಿಸಿದರು.

ಪ್ರಮುಖವಾಗಿ ಕಂದಾಯ ಇಲಾಖೆಗೆ ಸಂಬಂಧಿಸಿ ಪಹಣಿಯಲ್ಲಿ ಇರುವ ದೋಷದ ಕುರಿತಾಗಿ ಎಸಿ ಕೋರ್ಟ್‌ಗೆ ದೂರು ದಾಖಲಾಗುವ ವೇಳೆ ಮ್ಯುಟೇಶನ್‌ದಲ್ಲಿ ಇದ್ದ ಮಾಹಿತಿ ಇದೀಗ ಇಲ್ಲ ಎಂಬ ಆರೋಪವಿದೆ ಎಂಬ ದೂರು ಬಂದ ಹಿನ್ನಲೆಯಲ್ಲಿ ಕಂದಾಯ ಇಲಾಖೆ ಶಿರಸ್ತೆದಾರ್ ಪವನ್ ರೊಂದಿಗೆ ಚರ್ಚಿಸಿ ರೇಕಾರ್ಡ್ ಕೊಠಡಿಯಲ್ಲಿ ಅಸಲಿ ಪ್ರತಿ ಹುಡುಕಿ ರೈತನಿಗೆ ನ್ಯಾಯ ಒದಗಿಸುವಂತೆ ಸೂಚಿಸಿದರು.

ಮತ್ತೊಂದು ಪ್ರಕರಣದಲ್ಲಿ ತಾಲ್ಲೂಕಿನ ಗೋವಿನಕೆರೆ ಗ್ರಾಮದಲ್ಲಿ ದೇವರು ಜಮೀನನ್ನು ನಕಲಿ ದಾಖಲೆ ಸೃಷ್ಟಿಸಿ ಪರಭಾರೆ ಮಾಡಿದ್ದಾರೆ. ನಮ್ಮ ಗ್ರಾಮದಲ್ಲಿ ಇಲ್ಲದ ವ್ಯಕ್ತಿಗೆ ಖಾತೆ ಕೂರಿಸಿ ಆತನಿಂದ ಸುಮ ನಟರಾಜ್ ಎಂಬುವವರಿಗೆ ಕ್ರಯ ಮಾಡಲಾಗಿದೆ ಎಂದು ಗ್ರಾಮಸ್ಥರು ಹೊತ್ತು ತಂದ ದೂರಿಗೆ ಲೋಕಾಯುಕ್ತರು ಬಾಗೂರು ಹೋಬಳಿ ರಾಜಸ್ವ ನಿರೀಕ್ಷಕರಿಂದ ಮಾಹಿತಿ ಪಡೆದು ಭೂಮಿ ನೊಂದಣಿ ಆಗಿರುವುದರಿಂದ ಸಿವಿಲ್ ಕೋರ್ಟ್‌ನಲ್ಲಿ ದೂರು ದಾಖಲಿಸುವಂತೆ ಸೂಚಿಸಿದರು.

ಈ ಕುರಿತು ಮಾತನಾಡಿದ ಲೋಕಾಯುಕ್ತ ಇನ್ಸಪೆಕ್ಟರ್ ಸಿ.ಎಲ್. ಚಂದ್ರಶೇಖರ್, ಬೆಳಿಗ್ಗೆ 11 ರಿಂದ 1ರ ವರೆಗೂ ಸಾರ್ವಜನಿಕರಿಂದ ಅರ್ಜಿ ಪಡೆದು ಇಲಾಖೆ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಅವರ ಹಂತದಲ್ಲಿ ಬಗೆಹರಿಯಬಹುದಾದ ಸಮಸ್ಯೆಗಳನ್ನು ಅವರು ಬಗೆಹರಿಸುವುದಾಗಿ ಹೇಳಿದ್ದಾರೆ. ಅಧಿಕಾರಿಗಳು ಅರ್ಜಿಯ ಕುರಿತಾಗಿ ಏನು ಕ್ರಮ ಎಂಬುದಾಗಿ ಮಾಹಿತಿ ಪಡೆಯುತ್ತೇವೆ. ಮುಂದಿನ ಸಭೆ ವೇಳೆಗೆ ಅರ್ಜಿ ಇತ್ಯರ್ಥದ ಬಗೆ ಮಾಹಿತಿ ಪಡೆಯುತ್ತೆವೆ. ತಿಂಗಳಿಗೊಮ್ಮೆ ಜನಸಂಪರ್ಕ ಸಭೆ ಕರೆದು ಜನರ ಅಹವಾಲು ಪಡೆಯಲಾಗುತ್ತದೆ ಎಂದರು.

ಉಪತಹಶೀಲ್ದಾರ್ ನಾಗರಾಜು, ತಾಲ್ಲೂಕು ಪಂಚಾಯಿತಿ ಇಓ ಹರೀಶ್, ಎಡಿಎಲ್‌ಆರ್ ಲಲ್ಲೂ ಪ್ರಸಾದ್ ಇತರರಿದ್ದರು.

# ಅವಕಾಶ ಸಿಕ್ಕಾಗ ಜನಪರ ಕೆಲಸ ಮಾಡೋಣ: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ಅವಕಾಶ ಸಿಕ್ಕಾಗ ಸಾಧ್ಯವಾದಷ್ಟು ಜನಪರ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಜನಪ್ರತಿನಿಧಿಗಳ ಕರ್ತವ್ಯ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು. ತಾಲೂಕಿನ ಬಿರಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ದೊಡ್ಡನಾಗರ ಮುಖ್ಯರಸ್ತೆಯಿಂದ ಬೈಕೆರೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸುಮಾರು 1,825 ಮೀಟರ್ ಉದ್ದದ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮನ್ವಯಾಧಿಕಾರಿಯಾಗಿ ಸೇರಿದಂತೆ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದ ದಿವಂಗತ ಬೈಕೆರೆ ನಾಗೇಶ್ ಅವರ ಕನಸಿನ ಯೋಜನೆ ಇದಾಗಿದೆ. ಜನಪ್ರತಿನಿಧಿಗಳು ಮಾಡಬೇಕಾದ ಅನೇಕ ಕೆಲಸಗಳನ್ನು ಅಧಿಕಾರಿಯಾಗಿಯೇ ಅವರು ತಾಲೂಕಿಗೆ ಮಾಡಿಕೊಟ್ಟಿದ್ದಾರೆ. ಬೈಕೆರೆ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ರೂಪಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ ಎಂದು ಸ್ಮರಿಸಿದರು.

ಬೈಕೆರೆ ನಾಗೇಶ್ ಜೀವನಾವಧಿಯಲ್ಲಿ ಕಂಡಿದ್ದ ಈ ರಸ್ತೆ ನಿರ್ಮಾಣದ ಕನಸು ನನ್ನ ಅಧಿಕಾರಾವಧಿಯಲ್ಲಿ ಸಾಕಾರವಾಗುತ್ತಿರುವುದು ಸಂತೋಷದ ಸಂಗತಿ. ಹಲವು ವರ್ಷಗಳಿಂದ ನಿರೀಕ್ಷೆಯಲ್ಲಿದ್ದ ಈ ರಸ್ತೆ ಕಾಮಗಾರಿ ಇದೀಗ ಕಾರ್ಯರೂಪಕ್ಕೆ ಬರುತ್ತಿದೆ. ಅವರ ಸ್ಮರಣಾರ್ಥ 1.70 ಕೋಟಿ ರೂ. ವೆಚ್ಚದಲ್ಲಿ ರಸ್ತೆ ನಿರ್ಮಿಸಲಾಗುತ್ತಿದೆ ಎಂದು ಹೇಳಿದರು.

ಎತ್ತಿನಹೊಳೆ ಯೋಜನೆ ಕುರಿತು ಮಾತನಾಡಿದ ಅವರು, ಶಾಸಕನಾದ ಬಳಿಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ 500 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೆ. ಈ ವರೆಗೆ 72 ಕೋಟಿ ರೂ. ಬಿಡುಗಡೆಯಾಗಿದೆ. ಎತ್ತಿನಹೊಳೆ ಯೋಜನೆಯಿಂದ ತಾಲೂಕಿನ ಪರಿಸರಕ್ಕೆ ಕೆಲವು ಹಾನಿ ಉಂಟಾದರೂ, ಬಯಲು ಪ್ರದೇಶಗಳ ಜನತೆಗೆ ಕುಡಿಯುವ ನೀರು ಒದಗಿಸಲು ನಮ್ಮ ಕ್ಷೇತ್ರದ ಜನರು ಸಹಕಾರ ನೀಡಿದ್ದಾರೆ. ಈ ಯೋಜನೆಯಿಂದ ಏಳು ಜಿಲ್ಲೆಗಳ ಸುಮಾರು 70 ಲಕ್ಷ ಜನರಿಗೆ ಪ್ರಯೋಜನವಾಗಲಿದೆ ಎಂದರು.

ನಾನು ಶಾಸಕನಾದ ನಂತರ ಕ್ಷೇತ್ರದ ಅಭಿವೃದ್ಧಿಗೆ ಸುಮಾರು 110 ಕೋಟಿ ರೂ.ಕ್ಕೂ ಅಧಿಕ ಅನುದಾನ ತಂದಿದ್ದೇನೆ. ಅಧಿಕಾರಿಗಳು ಜನಸಾಮಾನ್ಯರಿಗೆ ಗೌರವ ನೀಡಿ, ತಮ್ಮ ಹುದ್ದೆಯ ಜವಾಬ್ದಾರಿಯನ್ನು ಅರಿತು ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಕಡಬನಹಳ್ಳಿಯಿಂದ ಕೆಲಗಳಲೆವರೆಗೆ ರಸ್ತೆ ಅಭಿವೃದ್ಧಿಗೆ ಶೀಘ್ರದಲ್ಲೇ ಭೂಮಿಪೂಜೆ ನೆರವೇರಿಸಲಾಗುವುದು. ಪಟ್ಟಣದಲ್ಲಿ ಬೈಕೆರೆ ನಾಗೇಶ್ ನಿರ್ಮಿಸಿದ್ದ ಉದ್ಯಾನವನವನ್ನು ಸುಮಾರು 60 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ಅದಕ್ಕೆ ಬೈಕೆರೆ ನಾಗೇಶ್ ಉದ್ಯಾನವನ ಎಂದು ಹೆಸರಿಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸುಗುಣ ನಾಗೇಶ್, ಬಿರಡಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸೋಮಶೇಖರ್, ಎತ್ತಿನಹೊಳೆ ಯೋಜನೆಯ ಅಭಿಯಂತರ ಪ್ರಮೋದ್, ಬಿಜೆಪಿ ಮುಖಂಡರಾದ ಅಗ್ನಿ ಸೋಮಶೇಖರ್, ನಿಖಿಲ್ ಹಲಸುಲಿಗೆ, ಯಶವಂತ್, ಜೀವನ್, ಷಣ್ಮುಖ, ಜಯರಾಜ್, ಗುತ್ತಿಗೆದಾರ ಸುರೇಶ್ ಸೇರಿ ಉಪಸ್ಥಿತರಿದ್ದರು.

# ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಶ್ರಮ ವಹಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಸಾಧಿಸಲು ತಾಲೂಕಿನ ಎಲ್ಲಾ ಶಾಲೆಗಳು ಹೆಚ್ಚಿನ ಶ್ರಮ ವಹಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಕರೆ ನೀಡಿದರು.

ತಾಲೂಕಿನ ಮಗ್ಗೆ ಗ್ರಾಮದ ಇನ್ಸ್ಪೈರ್ ಶಾಲೆಯ ವಾರ್ಷಿಕೋತ್ಸವದಲ್ಲಿ ಮಾತನಾಡಿ, ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಸಕಲೇಶಪುರ ತಾಲೂಕು ರಾಜ್ಯದಲ್ಲಿ 3ನೇ ಸ್ಥಾನ ಮತ್ತು ಆಲೂರು ತಾಲೂಕು 23ನೇ ಸ್ಥಾನ ಗಳಿಸಿದ್ದು ಜಿಲ್ಲಾ ಮಟ್ಟದಲ್ಲಿ ಸಕಲೇಶಪುರ ಮೊದಲ ಸ್ಥಾನ ಹಾಗೂ ಆಲೂರು 4ನೇ ಸ್ಥಾನ ಪಡೆದಿರುವುದು ಹೆಮ್ಮೆಯ ಸಂಗತಿ. ಇದೇ ಸಾಧನೆಯನ್ನು ಮುಂದುವರಿಸಿಕೊಂಡು ಈ ಬಾರಿ ಮೊದಲ ಸ್ಥಾನ ಗುರಿಯಾಗಿರಬೇಕು ಎಂಬುದು ನಮ್ಮೆಲ್ಲರ ಆಶಯವಾಗಿರಲಿ ಎಂದು ಹೇಳಿದರು.

ಈ ಬಾರಿ ನೂರಕ್ಕೆ ನೂರು ಫಲಿತಾಂಶ ಸಾಧಿಸುವ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯಪ್ರವೃತ್ತರಾಗಬೇಕು. ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ಒತ್ತು ನೀಡಿ, ಅವರ ಸಾಮರ್ಥ್ಯಕ್ಕೆ ತಕ್ಕಂತೆ ಮಾರ್ಗದರ್ಶನ ಮಾಡಬೇಕು. ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಜೀವನದ ಅತ್ಯಂತ ಮಹತ್ವದ ಘಟ್ಟವಾಗಿದ್ದು, ಎಲ್ಲಾ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರು ಫಲಿತಾಂಶ ಸುಧಾರಣೆಗೆ ವಿಶೇಷ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಉತ್ತಮ ಫಲಿತಾಂಶಕ್ಕಾಗಿ ಶಿಕ್ಷಕರು ವಿದ್ಯಾರ್ಥಿಗಳ ಬುದ್ಧಿಮಟ್ಟ ಹಾಗೂ ಕಲಿಕೆ ಶೈಲಿಯನ್ನು ಅರಿತು, ಅವರ ಅವಶ್ಯಕತೆಗೆ ಅನುಗುಣವಾಗಿ ಬೋಧನೆ ಮಾಡಿದಾಗ ಮಾತ್ರ ಗುರಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

# ಮೂವರು ಅತ್ಯಾಚಾರಿ ಅಪರಾಧಿಗಳಿಗೆ ಶಿಕ್ಷೆ ಪ್ರಕಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಅಪ್ರಾಪ್ತೆ ಮೇಲೆ ನಿರಂತರ ಅತ್ಯಾಚಾರ ಎಸಗಿದ್ದ ಮೂವರು ಅಪರಾಧಿಗಳಿಗೆ ಜಿಲ್ಲಾ ನ್ಯಾಯಾಲಯ ಕಠಿಣ ಶಿಕ್ಷೆ ವಿಧಿಸಿದೆ.

ಸಕಲೇಶಪುರ ತಾಲೂಕಿನ ಗ್ರಾಮವೊಂದರ ರೂಪೇಶ್ ಎಂಬಾತನಿಗೆ ಪೋಕ್ಸೋ ಕಾಯ್ದೆಯಡಿ 10 ವರ್ಷ ಜೈಲು, 25 ಸಾವಿರ ರೂ. ದಂಡ ಹಾಗೂ ಎಸ್‌ಸಿ-ಎಸ್‌ಟಿ ಕಾಯ್ದೆಡಿ ಜೀವಾವಧಿ ಶಿಕ್ಷೆ ಪ್ರಕಟಿಸಲಾಗಿದೆ. ಪ್ರಕರಣದ 2ನೇ ಆರೋಪಿಯಾಗಿದ್ದ ಮೂಡಿಗೆರೆ ತಾಲ್ಲೂಕಿನ ಹೊನ್ನಪ್ಪ ಹಾಗೂ ಹಾನುಬಾಳು ಹೋಬಳಿಯ ಚಂದ್ರಶೇಖರನಿಗೆ ತಲಾ 10 ವರ್ಷ ಕಾರಾಗೃಹ ಶಿಕ್ಷೆ ಹಾಗು 25 ಸಾವಿರ ರೂ. ದಂಡ ವಿಧಿಸಲಾಗಿದೆ.


2015ರಲ್ಲಿ ಸಕಲೇಶಪುರ ತಾಲೂಕಿನ ಗ್ರಾಮವೊಂದರಲ್ಲಿ ಈ ಪ್ರಕರಣ ಬೆಳಕಿಗೆ ಬಂದಿತ್ತು. ಕಾಫಿ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದ ಅಪ್ರಾಪ್ತೆಯ ಮೇಲೆ ಮೂವರು ಅತ್ಯಾಚಾರ ಎಸಗಿದ್ದರು.

ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದರು ಎನ್ನಲಾಗಿದೆ. ಬಾಲಕಿಯ ಆರೋಗ್ಯದಲ್ಲಿ ಬದಲಾವಣೆ ಕಂಡಿದ್ದರಿಂದ ಪೋಷಕರು ಆಸ್ಪತ್ರೆಗೆ ಕರೆತಂದಾಗ ಗರ್ಭಿಣಿಯಾಗಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ತಿಳಿದುಬಂದಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಗ್ರಾಮಾಂತರ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಹೆಚ್.ಎಂ.ದೇವರಾಜು ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಶ್ರೀನಿವಾಸಗೌಡ ವಾದ ಮಂಡಿಸಿದರು.

# ದಲಿತರಿಗೆ ದೇಗುಲ ಪ್ರವೇಶ: ಸಾಮರಸ್ಯದ ಪಾಠ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ತಾಲೂಕಿನ ಮೋಕಲಿ ಗ್ರಾಮದಲ್ಲಿ ದಲಿತರಿಗೆ ದೇವಸ್ಥಾನ ಪ್ರವೇಶಕ್ಕೆ ಮುಕ್ತ ಅವಕಾಶ ಕಲ್ಪಿಸಿದ ಅಧಿಕಾರಿಗಳು ಸಾಮರಸ್ಯದ ಪಾಠ ಹೇಳಿದ್ದಾರೆ. ಗ್ರಾಮದಲ್ಲಿ ಇತ್ತೀಚೆಗೆ ಲೋಕಾರ್ಪಣೆಗೊಂಡ ಶ್ರೀ ಆಂಜನೇಯ ಸ್ವಾಮಿ ದೇವಾಲಯಕ್ಕೆ ದಲಿತರ ಪ್ರವೇಶ ನಿಷೇಧಿಸಲಾಗಿತ್ತು. ಈ ಸಂಬಂಧ ದಲಿತರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ದೇಗುಲ ಉದ್ಘಾಟನಾ ಸಮಾರಂಭದಲ್ಲಿ ಗೊಂದಲ ಸೃಷ್ಟಿಸಬಾರದೆಂದು ತಹಶೀಲ್ದಾರ್ ಕೋರಿದ್ದರ ಹಿನ್ನೆಲೆಯಲ್ಲಿ ಕಾರ್ಯಕ್ರಮ ಸಾಂಗವಾಗಿ ನೆರವೇರಿತ್ತು. ಬುಧವಾರ ಗ್ರಾಮಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಹಾಗೂ ಅಧಿಕಾರಿಗಳು ಸೌಹಾರ್ದ ಸಭೆ ನಡೆಸಿದರು. ಸವರ್ಣಿಯರು ಕೂಡ ಯಾವುದೇ ಗೊಂದಲಕ್ಕೆ ಎಡೆಮಾಡಿಕೊಡದೆ ದಲಿತರು ದೇಗುಲ ಪ್ರವೇಶ ನಿರ್ಧಾರವನ್ನು ಸ್ವಾಗತಿಸಿದರು.

ದೇವಾಲಯ ಉದ್ಘಾಟನಾ ಸಮಾರಂಭಕ್ಕೆ ಅಡ್ಡಿಪಡಿಸುವುದು ಬೇಡ. ಕೆಲವು ದಿನಗಳ ನಂತರ ಸೌಹಾರ್ದ ಸಭೆ ನಡೆಸಿ ದೇವಾಲಯ ಪ್ರವೇಶವನ್ನು ಕಲ್ಪಿಸುವ ಭರವಸೆಯನ್ನು ತಹಶೀಲ್ದಾರ್ ಸೌಮ್ಯ, ಪೊಲೀಸ್ ಉಪ ನಿರೀಕ್ಷಕಿ ಕಾವ್ಯ ಅವರು ಭರವಸೆ ನೀಡಿದ ಮೇರೆಗೆ ದಲಿತ ಸಮುದಾಯದವರು ಹೋರಾಟ ಕೈಬಿಟ್ಟು ದೇವರ ಕಾರ್ಯ ನಡೆಯಲು ಅವಕಾಶ ಮಾಡಿಕೊಟ್ಟಿದ್ದರು. ತಾಲೂಕು ಆಡಳಿತ ಗ್ರಾಮಕ್ಕೆ ಭೇಟಿ ನೀಡಿ ದಲಿತ ಮತ್ತು ಸವರ್ಣೀಯರ ಮುಖಂಡರು, ಗ್ರಾಮಸ್ಥರ ಸಮ್ಮುಖದಲ್ಲಿ ಸಭೆ ನಡೆಸಿ ಚರ್ಚಿಸಿದರು. ಇಲ್ಲಿ ಅಸ್ಪೃಶ್ಯತೆ ಆಚರಣೆ ಕಂಡುಬರುತ್ತಿಲ್ಲ. ಎರಡೂ ಸಮುದಾಯದವರು ಸೌಹಾರ್ದದಿಂದ ಇರುವುದು ಕಂಡುಬಂದಿದೆ. ಪ್ರಮುಖವಾಗಿ ಇತ್ತೀಚೆಗೆ ಲೋಕಾರ್ಪಣೆಗೊಂಡಿರುವ ಶ್ರೀ ಆಂಜನೇಯಸ್ವಾಮಿ ದೇವಾಲಯ ಪ್ರವೇಶ, ದರ್ಶನದು ಪ್ರಮುಖ ವಿಷಯವಾಗಿ ಅಭಿಪ್ರಾಯವ ವ್ಯಕ್ತವಾಗಿದೆ. ನಮ್ಮ ದೇಶದ ಕಾನೂನು ಮತ್ತು ದೇವರ ದರ್ಶನ ಎಲ್ಲಾ ವರ್ಗದವರಿಗೂ ಮುಕ್ತವಾಗಿದೆ. ಎಲ್ಲರೂ ಕೂಡ ಸಮಾನರು, ಯಾವುದೇ ರೀತಿಯ ಜಾತಿ ಬೇಧ, ಇತರೆ ಅನಿಷ್ಟ ಪದ್ಧತಿ ಆಚರಣೆಗೆ ಆಸ್ಪದವನ್ನು ಯಾರೂ ಕೂಡ ಕೊಡಬಾರದು, ಅನ್ಯೋನ್ಯತೆಯಿಂದ ಬಾಳುವುದನ್ನು ಮುಂದುವರಿಸಿ ಸಮಾಜಕ್ಕೆ ದೊಡ್ಡಸಂದೇಶವನ್ನು ನೀಡೋಣ ಇದಕ್ಕೆ ಎರಡು ಸಮಾಜದವರು ಸಹಮತದಿಂದ ಸ್ವೀಕಾರ ಮಾಡಿ ನಮ್ಮ ಸಮ್ಮುಖದಲ್ಲಿ ಒಟ್ಟಿಗೆ ದೇವಾಲಯ ಪ್ರವೇಶ ಮಾಡಿ ದರ್ಶನ ಪಡೆಯೋಣ ಎಂದು ಅಧಿಕಾರಿಗಳ ಸಮ್ಮುಖದಲ್ಲಿ ಗ್ರಾಮಸ್ಥರು ಪ್ರತಿಜ್ಞೆ ಮಾಡಿದರು.

# ಜಿಲ್ಲಾ ನ್ಯಾಯಾಲಯದಲ್ಲಿ ಪ್ರಥಮ ಚಿಕಿತ್ಸೆ ಸೌಲಭ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರತಿನಿತ್ಯ ಸಾವಿರಾರು ಜನರು ಸೇರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರ ತೆರೆಯಬೇಕೆಂಬ ಮನವಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸ್ಪಂದಿಸಿದ್ದು ಮಂಗಳವಾರದಿಂದ ಕಾಯಾರಂಭ ಮಾಡಿದೆ.

ವಿವಿಧ ಪ್ರಕರಣಗಳ ವಿಚಾರಣೆ, ಸಾಕ್ಷಿ ನುಡಿಯಲು ಹಾಗೂ ಇನ್ನಿತರ ಕೆಲಸಗಳಿಗಾಗಿ ಜಿಲ್ಲೆಯ ಸಾವಿರಾರು ಕಕ್ಷಿಗಾರರು ಬರುತ್ತಾರೆ. ಜೊತೆಗೆ ನ್ಯಾಯಾಲಯದಲ್ಲಿ ಒಂದೂವರೆ ಸಾವಿರ ವಕೀಲರದಿದ್ದಾರೆ. ನ್ಯಾಯಾಧೀಶರು, ಅಧಿಕಾರಿ ಹಾಗೂ ಸಿಬ್ಬಂದಿ ಸೇರಿ 15 ನ್ಯಾಯಾಲಯದಿಂದ ಸಾರ್ವಜನಿಕರು ಸೇರಿ ನಿತ್ಯ ಮೂರರಿಂದ ನಾಲ್ಕು ಸಾವಿರ ಜನರು ಇರುತ್ತಾರೆ. ಇಂತಹ ಜನನಿಬೀಡ ಸ್ಥಳಗಳಲ್ಲಿ ತುರ್ತು ಆರೋಗ್ಯ ಸೇವೆಗೆ ಪ್ರಥಮ ಚಿಕಿತ್ಸಾ ಕೇಂದ್ರದ ಅವಶ್ಯಕತೆ ಹೆಚ್ಚಿತ್ತು. ಈ ಸಂಬಂಧ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶೆ ಹೇಮಾವತಿ ಅವರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್ ಅವರೊಂದಿಗೆ ಮಾತುಕತೆ ನಡೆಸಿ ವ್ಯವಸ್ಥೆ ಮಾಡಿಕೊಡುವಂತೆ ಕೋರಿದ್ದರು. ಅದಕ್ಕೆ ಪ್ರತಿಫಲ ಸಿಕ್ಕಿದ್ದು ಕಕ್ಷಿಗಾರರು ಮತ್ತು ವಕೀಲರಿಗೆ ಅನುಕೂಲವಾಗಲಿದೆ.

### ವಾರದ ಹಿಂದಷ್ಟೇ ವ್ಯಕ್ತಿ ಮೃತ

ಅಣ್ಣ-ತಮ್ಮಂದಿರ ಜಮೀನು ವಾಜ್ಯ ಸಂಬಂಧ ವಿಚಾರಣೆಗೆ ಬಂದಿದ್ದ ವ್ಯಕ್ತಿಯೊಬ್ಬರು ವಾರದ ಹಿಂದಷ್ಟೇ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಕೋರ್ಟ್ ತೀರ್ಪು ಪ್ರಕಟವಾಗುತ್ತಿದ್ದಂತೆ ತನಗೆ ಸೋಲಾಯಿತೆಂದು ಮನನೊಂದ ವ್ಯಕ್ತಿ ಕಾರಿಡಾರ್‌ನಲ್ಲಿ ಅಸ್ವಸ್ಥನಾಗಿ ಕುಳಿತ. ಸಂಬಂಧಿಕರು ಬಂದು



ನೋಡುವಷ್ಟರಲ್ಲಿ ಪ್ರಜ್ಞೆತಪ್ಪಿತ್ತು. ತಕ್ಷಣವೇ ಅಂಬುಲೆನ್ಸ್ ಮೂಲಕ ಹಿಮ್ಸ್‌ಗೆ ಕರೆತರಲಾಯಿತಾದರೂ ಅಷ್ಟರಲ್ಲಿ ಮೃತಪಟ್ಟಿದ್ದರು. ಅದೇ ರೀತಿ ಮಹಿಳಾ ಕಕ್ಷಿದಾರರೊಬ್ಬರು ತಲೆ ಸುತ್ತು ಬಂದು ಬಿದ್ದಿರುವ ಘಟನೆ ಇತ್ತೀಚೆಗೆ ನಡೆದಿದೆ. ಈ ರೀತಿ ಅನಾರೋಗ್ಯ ಸಮಸ್ಯೆಗಳು ಮರುಕಳಿಸುತ್ತಿರುವ ಹಿನ್ನೆಲೆಯಲ್ಲಿ ಚಿಕಿತ್ಸಾ ಕೇಂದ್ರದ ಅವಶ್ಯಕತೆಯನ್ನು ಜಿಲ್ಲಾ ವಕೀಲರ ಸಂಘದ ಪದಾಧಿಕಾರಿಗಳು ನ್ಯಾಯಾಧೀಶರ ಗಮನಕ್ಕೆ ತಂದಿದ್ದರು.

### ಆಸ್ಪತ್ರೆಗೆ ದೂರ ನ್ಯಾಯಾಲಯ

ಜಿಲ್ಲಾಧಿಕಾರಿ ಕಚೇರಿ ಸಮೀಪದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲಾ ನ್ಯಾಯಾಲಯವನ್ನು 2021ರಲ್ಲಿ ಹೊಸ ಬಸ್ ನಿಲ್ದಾಣ ಎದುರಿನ ನೂತನ ಸಂಕೀರ್ಣಕ್ಕೆ ಸ್ಥಳಾಂತರಿಸಲಾಯಿತು. ಹೀಗಾಗಿ ಸಾರ್ವಜನಿಕರಿಗೆ ಆಸ್ಪತ್ರೆ ಸೇರಿ ಅಗತ್ಯ ಸೌಕರ್ಯಗಳು ದೂರವಾಗಿವೆ. ಮೊದಲಾದರೆ ಆಸ್ಪತ್ರೆ ಸಮೀಪದಲ್ಲೇ ಇದ್ದುದರಿಂದ ತಕ್ಷಣವೇ ದಾಖಲೆ ಮಾಡಬಹುದಿತ್ತು.

> **ಜಿಲ್ಲಾ ನ್ಯಾಯಾಲಯದಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರ ತೆರೆದಿದ್ದು, ಒಬ್ಬರು ನರ್ಸ್ ಹಾಗು ಡಿ ದರ್ಜೆ ನೌಕರರ ನಿಯೋಜಿಸಲಾಗಿದೆ. ವೈದ್ಯರ ಅವಶ್ಯಕತೆ ಎನಿಸಿದರೆ ಕಳುಹಿಸಿಕೊಡಲಾಗುವುದು. ಜಿಲ್ಲಾ ನ್ಯಾಯಾಧೀಶರ ನಿರ್ದೇಶನದಂತೆ ಕ್ರಮ ಕೈಗೊಳ್ಳಲಾಗಿದೆ.**
>
> **- ಡಾ. ಅನಿಲ್, ಡಿ.ಹೆಚ್.ಓ.**

ಈಗ ಅಂದಾಜು 3 ಕಿ.ಮೀ. ದೂರದಲ್ಲಿ ನ್ಯಾಯಾಲಯವಿದೆ. ಅಲ್ಲಿಂದ ಆ್ಯಂಬುಲೆನ್ಸ್ ಅಥವಾ ಕಾರುಗಳನ್ನು ರೋಗಿಗಳನ್ನು ಕರೆತರುವಷ್ಟರಲ್ಲಿ ಪರಿಸ್ಥಿತಿ ಕೈ ಮೀರುವ ಸಾಧ್ಯತೆಗಳು ಹೆಚ್ಚಿರುತ್ತವೆ. ಜೊತೆಗೆ ರೈಲ್ವೆ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿರುವುದು ಹಾಗು ರೈಲ್ವೆ ಬ್ಯಾರಿಕೇಡ್ ಹಾಕಿದರೆ ಕನಿಷ್ಠ 20 ನಿಮಿಷ ರಸ್ತೆಯಲ್ಲೇ ಕಳೆಯಬೇಕಾಗುತ್ತದೆ.

### ನರ್ಸ್, ಡಿ ಗ್ರುಪ್ ನೌಕರರ ನಿಯೋಜನೆ

ಜಿಲ್ಲಾ ನ್ಯಾಯಾಲಯದ ಮೊದಲ ಮಹಡಿಯಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರಕ್ಕೆ ಸುಸಜ್ಜಿತ ಕೊಠಡಿಯನ್ನು ಬಿಟ್ಟುಕೊಟ್ಟಿದ್ದು, ಸೇವೆಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಒಬ್ಬ ನರ್ಸ್ ಹಾಗೂ ಒಬ್ಬರು ಡಿ ದರ್ಜೆ ನೌಕರರನ್ನು ನಿಯೋಜಿಸಲಾಗಿದೆ. ಕೊಠಡಿಗೆ ನಾಮಫಲಕ ಹಾಗೂ ಸಣ್ಣಪುಟ್ಟ ಕೆಲಸಗಳಾಗಬೇಕಿದೆ. ನ್ಯಾಯಾಲಯದಲ್ಲಿ ಆರೋಗ್ಯ ಸೇವೆ ಲಭ್ಯವಿರುವ ಕುರಿತು ಜನರಿಗೆ ಇನ್ನಷ್ಟೇ ಗೊತ್ತಾಗಬೇಕಿದೆ. ವಿವಿಧ ಕೆಲಸಗಳ ನಿಮಿತ್ತ ನ್ಯಾಯಾಲಯಕ್ಕೆ ಬರುವವರು ಆರೋಗ್ಯದಲ್ಲಿ ಏರುಪೇರಾದರೆ ಅಲ್ಲಿಗೆ ಸಂಪರ್ಕಿಸಬಹುದು. ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ಅಲ್ಲಿಂದಲೇ ಆಸ್ಪತ್ರೆಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

# ಹಳೆಯ ದ್ವೇಷ ವ್ಯಕ್ತಿಗೆ ಚಾಕು ಇರಿತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಹಳೆಯ ದ್ವೇಷದಿಂದ ವ್ಯಕ್ತಿ ಮೇಲೆ ಚಾಕುವಿನಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಗರದ ಹೆಚ್‌ಕೆಜಿಎನ್ ನಗರದಲ್ಲಿ ನಡೆದಿದೆ.

ನಗರದ ಮೊಹಮ್ಮದ್ ಫೈಜಲ್ ಗಾಯಾಳು. ಶೇಖ್ ಮತೀನ್ ಆರೋಪಿ. ಮೊಹಮ್ಮದ್ ಫೈಜಲ್ ಹಾಗೂ ಅಪ್ತಾಬ್ ಮಲ್ಲಿಕ್ ಅವರು ಮಾತನಾಡುತ್ತಾ ನಿಂತಿದ್ದಾಗ ಬೈಕ್‌ನಲ್ಲಿ ಮೊಹಮ್ಮದ್ ಅಲಿ ಮತ್ತು ಶೇಖ್ ಮತೀನ್ ಬಂದಿದ್ದಾರೆ. ಮೊಹಮ್ಮದ್ ಅಲಿ ಅವರು ಫೈಜಲ್ ಜೊತೆಗೆ ಕುಶಲೋಪರಿ ವಿಚಾರಿಸಿ ಮುಂದೆ ಹೋಗುತ್ತಿದ್ದಾಗ ಹಿಂದೆ ಕುಳಿತಿದ್ದ ಶೇಖ್ ಮತೀನ್ ಫೈಜಲ್ ಕುರಿತು ಲಘುವಾಗಿ ಮಾತನಾಡಿದ್ದಾನೆ. ಅದನ್ನು ಕೇಳಿಸಿಕೊಂಡ ಮೊಹಮ್ಮದ್ ಫೈಜಲ್ ಕೂಗಿದಾಗ ಬೈಕ್‌ನಿಂದ ಕೆಳಗಿಳಿದು ವಾಪಾಸ್ ಬಂದ ಶೇಖ್ ಮತೀನ್, ಚಾಕುವಿನಿಂದ ಹಣೆ, ಕೆನ್ನೆ ಹಾಗೂ ಕುತ್ತಿಗೆಗೆ ಇರಿದಿದ್ದಾನೆ. ಗಾಯಾಳು ಫೈಜಲ್ ಜೋರಾಗಿ ಕೂಗಾಡಲು ಶುರುಮಾಡುತ್ತಿದ್ದಂತೆ ಅಲ್ಲಿಂದ ಕಾಲ್ಕಿತ್ತಿದ್ದಾನೆ. ಇಬ್ಬರ ನಡುವೆ ಹಲವು ವರ್ಷಗಳಿಂದ ದ್ವೇಷವಿತ್ತು ಎನ್ನಲಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಕ್ರಮ ಗೋ ಸಾಗಾಟ: ವ್ಯಕ್ತಿ ಬಂಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಕ್ರಮವಾಗಿ ಗೋ ಸಾಗಾಣಿಕೆ ಮಾಡುತ್ತಿದ್ದ ವಾಹನವನ್ನು ವಶಕ್ಕೆ ಪಡೆದಿರುವ ಶಾಂತಿಗ್ರಾಮ ಠಾಣೆ ಪೊಲೀಸರು ಆರು ಹಸುಗಳನ್ನು ರಕ್ಷಿಸಿದ್ದಾರೆ.

ನಾಗಮಂಗಲ ತಾಲ್ಲೂಕು ಅಳಿಸಂದ್ರ ಗ್ರಾಮದ ರಂಜಿತ್ ಬಂಧಿತ ಆರೋಪಿ. ಹಾಸನದಲ್ಲಿ ಹಸುಗಳನ್ನು ಖರೀದಿಸಿದ್ದ ಆರೋಪಿ ಬೆಂಗಳೂರಿನ ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ಸೋಮವಾರ ರಾತ್ರಿ 8.30ರ ಸಮಯದಲ್ಲಿ ಶಾಂತಿಗ್ರಾಮ ಟೋಲ್ ಗೇಟ್ ಬಳಿ ನಿಂತಿದ್ದಾಗ ಅಶೋಕ ಲೈಲ್ಯಾಂಡ್ ವಾಹನ ಪರಿಶೀಲಿಸಿದರು. ಆರು ಹಸುಗಳು ಪತ್ತೆಯಾಗಿದೆ. ಕಸಾಯಿ ಖಾನೆಗೆ ಸಾಗಿಸುತ್ತಿರುವುದಾಗಿ ರಂಜಿತ್ ವಿಚಾರಣೆಯಲ್ಲಿ ಒಪ್ಪಿಕೊಂಡಿದ್ದಾನೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವ ಶಾಸಕ ಶಿವಲಿಂಗೇಗೌಡ : ಆರೋಪ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರ ಉಲ್ಲಂಘನೆ, ಶಾಸಕರ ನಡೆ ನುಡಿಯ ಖಂಡಿಸಿ ಮತ್ತು ಕ್ಷೇತ್ರದಲ್ಲಿ ನಡೆದಿರುವ ಭ್ರಷ್ಟಾಚಾರ ಕುರಿತು ಬಿಜೆಪಿ ಆರೋಪಕ್ಕೆ ಶಾಸಕರು ನೇರವಾಗಿ ಸ್ಪಷ್ಟನೆ ನೀಡುವ ಬದಲು ತಮ್ಮ ಹಿಂಬಾಲಕರನ್ನು ಬಿಡುತ್ತಿದ್ದಾರೆ ಎಂದು ಬಿಜೆಪಿ ಗ್ರಾಮೀಣ ಮಂಡಲ ಮಾಜಿ ಪ್ರಧಾನ ಕಾರ್ಯದರ್ಶಿ ಶಿವರಾಜ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 15 ದಿನಗಳ ಹಿಂದೆ ನಾವು ಮಾಡಿದ ಆರೋಪಗಳಿಗೆ ಜವಾಬ್ದಾರಿಯುತ ಸ್ಥಾನದಲ್ಲಿರುವ ಶಾಸಕರು ಸ್ಪಷ್ಟನೆ ನೀಡಬೇಕಿತ್ತು. ಅದನ್ನು ಬಿಟ್ಟು ತಮ್ಮ ಹಿಂಬಾಲಕರಿಂದ ಹೇಳಿಕೆ ಕೊಡಿಸಿ ತಾವು ಜವಾಬ್ದಾರಿ ಮರೆತಂತೆ ವರ್ತಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅವರ ಹಿಂಬಾಲಕರು ಸುದ್ದಿಗೋಷ್ಠಿಯಲ್ಲಿ ಬಹಿರಂಗವಾಗಿ ಚರ್ಚೆಗೆ ಆಹ್ವಾನಿಸಿದ್ದಾರೆ ಇದನ್ನು ನಾನು ಸ್ವೀಕರಿಸಿದ್ದು ಅವರು ಯಾವಾಗ ಕರೆದರೂ ಬರಲು ಸಿದ್ಧ ಇರುವುದಾಗಿ ಹೇಳಿದರು. ಇಲಾಖೆವಾರು ನಡೆದಿರುವ ಭ್ರಷ್ಟಾಚಾರ ಅಥವಾ ಶಾಸಕರ ವ್ಯವಹಾರಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಚರ್ಚೆಯಾಗಲಿ ದಾಖಲೆ ಸಮೇತ ಉತ್ತರ ನೀಡುತ್ತೇನೆ ಎಂದು ಸವಾಲು ಹಾಕಿದರು.

ಶಾಸಕರ ವಿರುದ್ಧ ನನ್ನ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ. ಈ ಸಂಬಂಧ ರಾಜ್ಯಪಾಲರು ಹಾಗೂ ವಿಧಾನಸಭೆಯ ಸ್ಪೀಕರ್ ಅವರಿಗೂ ಸಹ ದೂರು ಸಲ್ಲಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ ಎಂದು ಇದೇ ಸಂದರ್ಭದಲ್ಲಿ ಮಾಧ್ಯಮದವರಿಗೆ ತಿಳಿಸಿದರು.

ಬಿಜೆಪಿ ನಗರ ಮಂಡಲದ ಮಾಜಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಬಿಜೆಪಿ ಮುಖಂಡ ಶ್ರೀನಿವಾಸ್ ಉಪಸ್ಥಿತರಿದ್ದರು.

# ಸಕ್ಕರೆ ಕಾರ್ಖಾನೆ ಚುನಾವಣೆ ಪಾರದರ್ಶಕತೆಗೆ ಒತ್ತು ನೀಡಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಗೆ ಈ ಬಾರಿಯ ಚುನಾವಣೆಯು ಪಾರದರ್ಶಕವಾಗಿ ನಡೆಯಬೇಕು ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಹೇಳಿದರು.

ತಾಲೂಕಿನ ಶ್ರೀನಿವಾಸಪುರದ ಬಳಿಯಿರುವ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಸಭಾಂಗಣದಲ್ಲಿ ನಡೆದ ತುರ್ತು ಸಭೆಯಲ್ಲಿ ಮಾತನಾಡಿ, ಕಾನೂನು ರೀತಿ ನಿಯಮಾನುಸಾರ ಚುನಾವಣೆ ನಡೆಯಬೇಕು ಎಂದರು.

2011ರಲ್ಲಿ ಚುನಾವಣೆ ನಡೆದಿದ್ದು ಇಲ್ಲಿಗೆ 15 ವರ್ಷಗಳು ಕಳೆದಿವೆ. ಕರೋನಾ ಹಾಗೂ ಇತರೆ ಕಾರಣ ತೋರಿಸಿ 10 ವರ್ಷ ಆಡಳಿತ ಮಾಡಿದ್ದಾರೆ. ಕಳೆದ ಎರಡು ವರ್ಷಗಳ ಹಿಂದೆಯೇ ಚುನಾವಣೆ ನಡೆಸಲೇಬೇಕೆಂದು ಒತ್ತಾಯಿಸಲಾಗಿದ್ದರು ಇದುವರೆಗೂ ಕಾಲ ಮುಂದೂಡುವ ಪ್ರಯತ್ನ ನಡೆಯುತ್ತಲೇ ಬಂದಿದೆ. ಆದರೆ ಚುನಾವಣೆ ನಡೆಸಲೇಬೇಕಾದ ದಿನ ಹತ್ತಿರವಾಗಿದೆ. ಮಾರ್ಚ್ ಇಲ್ಲವೇ



ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವ ಬಗ್ಗೆ ಚರ್ಚಿಸಲಾಗಿದೆ ಎಂದರು.

95-96ನೇ ಸಾಲಿನ ಚುನಾವಣೆಯಲ್ಲಿ ದೊಡ್ಡ ಗಲಾಟೆಯೇ ನಡೆದಿತ್ತು. ಈ ಬಾರಿಯ ಚುನಾವಣೆಯಲ್ಲಿ ಯಾವುದೇ ಷಡ್ಯಂತ್ರ, ಪಿತೂರಿ ಹಾಗೂ ಅಹಿತಕರ ಘಟನೆ ನಡೆಯದಂತೆ ಅಧಿಕಾರಿ ವರ್ಗ ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಸಿದರು. 35 ಸಾವಿರ ಷೇರುದಾರ ಅಥವಾ ಮತದಾರರನ್ನು ಹೊಂದಿದ್ದು ಕಳೆದ 15 ವರ್ಷಗಳಿಂದ ಮತದಾರರ ಪಟ್ಟಿ ಪರಿಷ್ಕರಣೆ ಆಗಿರುವುದಿಲ್ಲ. ಬಹುತೇಕರು ನಿಧನ ಹೊಂದಿದ್ದು ಕೆಲವರದ್ದು ಎರಡು ಕಡೆ ಪಟ್ಟಿಗಳಲ್ಲಿ ಸೇರ್ಪಡೆಯಾಗಿರುತ್ತದೆ. ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳು ಎಲ್ಲಾ ವಿಚಾರಗಳಲ್ಲಿಯೂ ಗಮನ ಹರಿಸಬೇಕಿದೆ ಎಂದು ತಿಳಿಸಿದರು.

ಸತ್ತವರಿಗೂ ಷೇರುದಾರರ ಸಕ್ಕರೆ ನೀಡಲಾಗುತ್ತಿದೆ. ನಿಧನ ಹೊಂದಿರುವವರ ಹೆಸರುಗಳು ಸಹ ಇನ್ನೂ ಪಟ್ಟಿಯಲ್ಲಿ ಉಳಿದಿವೆ. 20 ವರ್ಷಗಳ ಹಿಂದೆ ನಿಧನ ಹೊಂದಿರುವ ವ್ಯಕ್ತಿಯ ಮನೆಗೆ ಸಕ್ಕರೆ ನೀಡಲಾಗುತ್ತಿದೆ. ಹತ್ತು ಹಲವು ಲೋಪಗಳಿದ್ದು ಆಡಳಿತ ಮಂಡಳಿ ವೀಕ್ ಆಗಿದೆಯೇ ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

ಅದೇನೆ ಇರಲಿ ಮತದಾರರ ಗುರುತಿನ ಚೀಟಿಯನ್ನು ಪರಿಷ್ಕರಣೆಯೊಂದಿಗೆ ಹೊಸದಾಗಿ ನೀಡಬೇಕು. ಕಬ್ಬು ಬೆಳೆಗಾರ ರೈತನಿಗೆ ಮಾತ್ರ ಷೇರು ನೀಡಬೇಕು. ಆದರೆ ಜಮೀನು ಇಲ್ಲದಿದ್ದರೂ ಬಹುತೇಕರಿಗೆ ಷೇರು ನೀಡಲಾಗಿದೆ. ಅಲ್ಲದೆ ಒಂದೇ ದಿನ 5 ಸಾವಿರ ಷೇರುದಾರರ ಹೆಸರಿನಲ್ಲಿ ರಸೀದಿ ಹರಿಯಲಾಗಿದೆ. ಅಧಿಕಾರಿಗಳು ಬಿಗಿ ಭದ್ರತೆಯೊಂದಿಗೆ ಕಠಿಣ ಕ್ರಮಗಳನ್ನು ಕೈಗೊಂಡು ಚುನಾವಣೆ ನಡೆಸಬೇಕು ಎಂದು ಅಗ್ರಹಿಸಿದರು.

ವ್ಯವಸ್ಥಾಪಕ ನಿರ್ದೇಶಕ ಆರ್. ಜೆ.ಕಾಂತರಾಜ್ ಮಾತನಾಡಿ, ಈಗಾಗಲೇ ಪರಿಷ್ಕರಣೆ ಕಾರ್ಯ ಜರುಗಿದ್ದು 30,500 ಮತದಾರರು ಪಟ್ಟಿಯಲ್ಲಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆಗೆ ತಂಡ ರಚನೆ ಮಾಡಲಾಗಿದ್ದು ಯಾವುದೇ ಆಕ್ಷೇಪಣೆ ಬಂದಿಲ್ಲ ಎಂದರು.

ಮಾ. 15ಕ್ಕೆ ಚುನಾವಣೆ ನಿಗದಿ ಮಾಡಲಾಗಿತ್ತು. ಬಿಇಓ ಅವರಿಗೆ ಪತ್ರ ಬರೆಯಲಾಗಿದ್ದು ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಇರುವುದಾಗಿ ಹಿಂಬರಹ ನೀಡಿರುವ ಪರಿಣಾಮ ಮುಂದೂಡಲಾಗಿದೆ. ಏಪ್ರಿಲ್ 5 ಇಲ್ಲವೇ 12 ರಲ್ಲಿ ಚುನಾವಣೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಏಪ್ರಿಲ್ 3ರ ಒಳಗಾಗಿ ಮತದಾರರು ಹೊಸ ಚೀಟಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು. ಸಭೆಯಲ್ಲಿ ನಿರ್ದೇಶಕ ರವೀಶ್, ಪ್ರಮುಖರಾದ ಮಂಜುನಾಥ್, ಸಿ.ಟಿ.ಅಶೋಕ್, ಅಣತಿ ಆನಂದ್, ಶಿವರಾಂ, ರಾಮೇಗೌಡ, ಗಿರೀಶ್ ಇತರರು ಹಾಜರಿದ್ದರು.

## ರಾಗಿ ಖರೀದಿಯಲ್ಲಿ ಲೋಪವಾದರೆ ಅಧಿಕಾರಿಗಳೇ ಹೊಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ರಾಗಿ ಖರೀದಿಯಲ್ಲಿ ರೈತರಿಗೆ ಅನ್ಯಾಯ ಆಗದಂತೆ ಹಾಗೂ ಖರೀದಿಸಿದ ರಾಗಿಯಲ್ಲಿ ಕಲಬೆರಕೆ ಕಂಡುಬಂದರೆ ಅದಕ್ಕೆ ಅಧಿಕಾರಿಗಳೇ ನೇರ ಹೊಣೆಗಾರರು ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಎಚ್ಚರಿಕೆ ನೀಡಿದರು.

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದಿಂದ ನ್ಯಾಫೆಡ್ ರಾಗಿ ಖರೀದಿ ಕೇಂದ್ರ ಉದ್ಘಾಟಿಸಿ ಮಾತನಾಡಿದರು. ರೈತರ ಬೆವರು ಮತ್ತು ಶ್ರಮಕ್ಕೆ ಪ್ರೋತ್ಸಾಹ ಧನದ ಮೂಲಕ ಸರ್ಕಾರ ಸ್ಪಂದಿಸುವ ಕೆಲಸ ಮಾಡುತ್ತಿದೆ. ಸರ್ಕಾರದ ಆಶಯಕ್ಕೆ ತಕ್ಕಂತೆ ನ್ಯಾಫೆಡ್ ಕೇಂದ್ರ ಕಾರ್ಯ ನಿರ್ವಹಿಸುವಂತೆ ಕರೆ ನೀಡಿದರು.

ರೈತರೂ ಉತ್ತಮವಾದ ರಾಗಿಯನ್ನು ನ್ಯಾಫೆಡ್ ಕೇಂದ್ರಕ್ಕೆ ತರಬೇಕು. ಸರ್ಕಾರದ ನಿಯಮಾನುಸಾರ, ತಮ್ಮ ರಾಗಿ ಖರೀದಿಸಲಾಗುವುದು. ನಿಯಮ ಉಲ್ಲಂಘಿಸಿ ನ್ಯಾಫೆಡ್ ಸಿಬ್ಬಂದಿ ಮತ್ತು ಅಧಿಕಾರಿಗಳು ನಡೆದುಕೊಂಡರೆ ಆ ಬಗ್ಗೆ ತಮ್ಮ ಗಮನಕ್ಕೆ ತರುವಂತೆ ಶಾಸಕರು, ರೈತರಿಗೆ ಕಿವಿಮಾತು ಹೇಳಿದರು.

ಕಳೆದ ಸಲ ರಾಗಿ ಖರೀದಿಯಲ್ಲಿ ಹಲವು ದೂರುಗಳು ಕೇಳಿ ಬಂದಿದ್ದವು. ಈ ರೀತಿಯ ದೂರುಗಳು ಮತ್ತೆ ಈ ಬಾರಿ ಮರುಕಳಿಸಿದರೆ ಅದಕ್ಕೆ ಕಾರಣರಾಗುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲು ನಾನೇ ಶಿಫಾರಸು ಮಾಡುವುದಾಗಿ ಅಧಿಕಾರಿಗಳಿಗೆ ಎಚ್ಚರಿಸಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿ ಸಿದ್ದರಂಗಸ್ವಾಮಿ ಮಾತನಾಡಿ, ಪ್ರತಿ ಎಕರೆಗೆ ತಲಾ 10 ಕ್ವಿಂಟಾಲ್‌ನಿಂದ ಗರಿಷ್ಠ 50 ಕ್ವಿಂಟಾಲ್ ರಾಗಿಯನ್ನು ಒಬ್ಬ ರೈತರಿಂದ ಖರೀದಿ ಮಾಡಲಾಗುವುದು. ಅರಸೀಕೆರೆ, ಗಂಡಸಿ, ಬಾಣಾವರ, ಜೆ.ಸಿ.ಪುರ ಹಾಗೂ ಜಾವಗಲ್‌ನಲ್ಲಿ ನ್ಯಾಫೆಡ್ ರಾಗಿ ಖರೀದಿ ಕೇಂದ್ರ ತೆರೆಯಲಿದ್ದು, ಸಿನಿಯಾರಿಟಿ ಆಧಾರದ ರಾಗಿ ಖರೀದಿ ಮಾಡಲಾಗುವುದು. ತಾಲೂಕಿನ ರೈತರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ನ್ಯಾಫೆಡ್ ಕೇಂದ್ರಕ್ಕೆ ನಿತ್ಯವೂ ಭೇಟಿ ನೀಡುವುದಾಗಿ ತಿಳಿಸಿದ ಶಾಸಕರು, ಈ ವೇಳೆ ಏನಾದರೂ ಲೋಪದೋಷ ಅಥವಾ ಅಕ್ರಮ ಕಂಡುಬಂದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಇದೇ ವೇಳೆ ರಾಗಿ ಖರೀದಿ ಕೇಂದ್ರಕ್ಕೆ ಬರುವವರಿಗೆ ಉಪಾಹಾರದ ವ್ಯವಸ್ಥೆ ಮಾಡಿಸುವುದಾಗಿ ಭರವಸೆ ನೀಡಿದರು.

ಜಿಲ್ಲಾ ನ್ಯಾಫೆಡ್ ಸಂಸ್ಥೆಯ ವ್ಯವಸ್ಥಾಪಕಿ ಅನುರಾಧ, ಆಹಾರ ಇಲಾಖೆ ಶಿರಸ್ತೇದಾರ್ ಬಾಲಚಂದ್ರ, ರೈತ ಸಂಘದ ಮುಖಂಡರಾದ ಬೋರನಕೊಪ್ಪಲು ಶಿವಲಿಂಗಪ್ಪ, ದಯಾನಂದ್, ಬಗರ್ ಹುಕುಂ ಸಮಿತಿಯ ಸದಸ್ಯ, ಬಾಣಾವರ ಜಯಣ್ಣ ಹಾಗೂ ಇತರರಿದ್ದರು.

# ಫೆ. 28ಕ್ಕೆ ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿದ ಫೆ. 28ರ ಶನಿವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನ, ಧನ್ಯತಾ ಸಮಾರಂಭ, ಸಂಘದ ಸುವರ್ಣ ಮಹೋತ್ಸವ ಹಾಗೂ ಗುರುವಂದನಾ ಸಮಾರಂಭ ಆಯೋಜಿಸಿದ್ದು, ತಾಲೂಕಿನ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರು ಭಾಗವಹಿಸಬೇಕೆಂದು ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಪಾಲಾಕ್ಷ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಾಥಮಿಕ ಶಾಲಾ ಶಿಕ್ಷಕರ ಹಲವಾರು ಸಮಸ್ಯೆಗಳನ್ನು ಮುಖ್ಯಮಂತ್ರಿ, ಸಚಿವರು, ಇಲಾಖೆ ಅಧಿಕಾರಿಗಳಿಗೆ ಸಲ್ಲಿಸುತ್ತಲೇ ಬಂದಿದ್ದೇವೆ. ಜತೆಗೆ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನೂ ನೀಡಲಾಗುತ್ತಿದೆ. ಇದರೊಂದಿಗೆ ಸರ್ಕಾರದ ವಹಿಸಿದ ಹಲವಾರು ಗುರುತರ ಜವಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಆದರೂ




ಸರ್ಕಾರಿ ಸೌಲಭ್ಯಗಳು ಸರಿಯಾಗಿ ಸಿಗುತ್ತಿಲ್ಲ. ಇದು ಸಿಗುವಂತ್ತಾಗಬೇಕು. ಅಲ್ಲದೆ ದೀರ್ಘಾವಧಿಯಿಂದ ಇದ್ದ ಸಮಸ್ಯೆಗಳನ್ನು ಬಗೆಹರಿಸುತ್ತಿರುವ ಸಂದರ್ಭ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಶಿಕ್ಷಕರ ನೂರಾರು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರ ಮತ್ತು ಇಲಾಖೆಯ ಗಮನ ಸೆಳೆದು ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದೆ. ನಮ್ಮ ಸಂಘದ ಹಲವಾರು ಬೇಡಿಕೆಗಳನ್ನು ಸರ್ಕಾರ ಈಡೇರಿಸಿದ್ದು, ಧನ್ಯತಾ ಸಮಾರಂಭ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರ ನಾಯಕರಹಳ್ಳಿ ಮಾತನಾಡಿ, 55 ವರ್ಷ ಪೂರೈಸಿರುವ ಸಂಘಕ್ಕೆ ಹಲವಾರು ಸಮಸ್ಯೆಗಳಿದ್ದವು. ಅದನ್ನು ರಾಜ್ಯ ಸರ್ಕಾರ ಬಗೆಹರಿಸಿದೆ. ಹೀಗಾಗಿ ಧನ್ಯತಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಂದು ದಿನದ ಕಾರ್ಯಾಗಾರ ಆಯೋಜಿಸಿದ್ದು, ಇಲ್ಲಿ ನಮ್ಮ ಹಕ್ಕು ಮತ್ತು ಬೇಡಿಕೆಗಳನ್ನು ಮಂಡಿಸಲಾಗುವುದು. ಮತ್ತು ವಿವಿಧ ಗೋಷ್ಠಿಗಳಿರುತ್ತದೆ. ಅಲ್ಲದೆ ಭೋದಕೇತರ ಕೆಲಸ ವಹಿಸದೆ ಶಿಕ್ಷಕರ ಕೆಲಸ ಮಾಡಲು ಬಿಟ್ಟು, ಶಿಕ್ಷಕರನ್ನು ಶಿಕ್ಷಣ ಹೊರತುಪಡಿಸಿ ಇತರೆ ಸರ್ಕಾರಿ ಕೆಲಸಗಳಿಗೆ ನೇಮಿಸುವುದನ್ನು ನಿಲ್ಲಿಸುವಂತೆ ಒತ್ತಾಯಿಸಲಾಗುವುದು. ಜತೆಗೆ ಸರ್ಕಾರಿ ಶಾಲೆಗಳಲ್ಲೆ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆದು ಸರ್ಕಾರಿ ಶಾಲೆಗಳನ್ನು ಉಳಿಸುವಂತೆ ಮನವಿ ಮಾಡಲಾಗುವುದು. ಇದರೊಂದಿಗೆ ಎಲ್ಲ ಸರ್ಕಾರಿ ನೌಕರರ ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಯಲ್ಲಿ ಓದಿಸಲು ಸುಗ್ರಿವಾಜ್ಞೆ ಮೂಲಕ ಆದೇಶಿಸಬೇಕೆಂದು ಸಹ ಇದೇ ಸಂದರ್ಭ ಮನವಿ ಮಾಡಲಿದ್ದೇವೆ. ಆದ್ದರಿಂದ ನಮ್ಮ ಈ ಸಮಾರಂಭಕ್ಕೆ ಜಿಲ್ಲೆ ಮತ್ತು ತಾಲೂಕಿನ ಎಲ್ಲ ಶಿಕ್ಷಕ ಬಾಂಧವರು ತಪ್ಪದೆ ಆಗಮಿಸಬೇಕು ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಾಥಾಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜು, ತಾಲೂಕು ಪ್ರಧಾನ ಕಾರ್ಯದರ್ಶಿ ರಘು ಕುಮಾರ್, ನಿರ್ದೇಶಕರಾದ ಲತಾ, ಜಯಣ್ಣ, ರವಿ ಇದ್ದರು.

## ಪರೀಕ್ಷೆ ಒಂದು ಹಂತ ಮಾತ್ರ ಜೀವನದ ಅಂತಿಮ ತೀರ್ಪು ಅಲ್ಲ

ಪರೀಕ್ಷೆಗಳು ವಿದ್ಯಾರ್ಥಿಯ ಸಾಮರ್ಥ್ಯವನ್ನು ಅಳೆಯುವ ಒಂದು ಸಣ್ಣ ಮೆಟ್ಟಿಲು ಮಾತ್ರ. ಅಂಕಗಳು ನಿಮ್ಮ ಮೌಲ್ಯವನ್ನು ನಿರ್ಧರಿಸುವುದಿಲ್ಲ, ನಿಮ್ಮ ಪರಿಶ್ರಮ, ಪ್ರಾಮಾಣಿಕತೆ ಮತ್ತು ಆತ್ಮವಿಶ್ವಾಸವೇ ನಿಮ್ಮ ನಿಜವಾದ ಶಕ್ತಿ. ಕೆಲವು ಪ್ರಶ್ನೆಗಳು ಕಠಿಣವಾಗಬಹುದು, ಕೆಲವು ಉತ್ತರಗಳು ನೆನಪಿಗೆ ಬರದೇ ಇರಬಹುದು ಅದು ಸಹಜ. ಅದರಿಂದ ನಿಮ್ಮ ಭವಿಷ್ಯ ಕತ್ತಲೆಯಾಗುವುದಿಲ್ಲ. ಪ್ರತಿಯೊಂದು ಪ್ರಯತ್ನವೂ ನಿಮ್ಮನ್ನು ಮತ್ತಷ್ಟು ಬಲಿಷ್ಠರನ್ನಾಗಿ ಮಾಡುತ್ತದೆ. ಭಯವನ್ನು ಮನಸ್ಸಿನಿಂದ ದೂರ ಮಾಡಿ, ಸಿದ್ಧತೆಯ ಮೇಲೆ ಗಮನ ಕೊಡಿ. ಸಮಯವನ್ನು ಸರಿಯಾಗಿ ಬಳಸಿ, ವಿಶ್ರಾಂತಿಗೂ ಮಹತ್ವ ನೀಡಿ, ನಿಮ್ಮ ಮೇಲೆ ನಂಬಿಕೆ ಇಡಿ. ಯಶಸ್ಸು ಎಂದರೆ ಒಂದೇ ಪರೀಕ್ಷೆಯ ಫಲಿತಾಂಶವಲ್ಲ. ಅದು ನಿರಂತರ ಪ್ರಯತ್ನಗಳ ಫಲ. ಧೈರ್ಯದಿಂದ ಪರೀಕ್ಷೆಯನ್ನು ಎದುರಿಸಿ, ತಪ್ಪುಗಳಿಂದ ಕಲಿಯಿರಿ, ಮುಂದಿನ ಹೆಜ್ಜೆಯನ್ನು ಆತ್ಮವಿಶ್ವಾಸದಿಂದ ಇಡಿ. ನೆನಪಿಡಿ ನಿಮ್ಮ ಕನಸುಗಳು ಯಾವುದೇ ಪರೀಕ್ಷೆಗಿಂತ ದೊಡ್ಡವು.

**- ಅಂತೋಣಿ ಮುತ್ತು ವಿ, ಶಿಕ್ಷಕರು**

**7259675543**

## ಇತಿಹಾಸದಲ್ಲಿ ಈ ದಿನ

### ಫೆಬ್ರವರಿ-12

**1948:** ಮಹಾತ್ಮ ಗಾಂಧೀಜಿಯವರ ಅಸ್ಥಿಗಳನ್ನು ದೇಶದ ವಿವಿಧ ನದಿಗಳಲ್ಲಿ ವಿಸರ್ಜನೆ ಮಾಡಲಾಯಿತು.

**1994:** ನಾರ್ವೆಯ ಲಿಲ್ಲಿಹ್ಯಾಮರ್‌ನಲ್ಲಿ ಚಳಿಗಾಲದ ಒಲಿಂಪಿಕ್ ಕ್ರೀಡಾಕೂಟ ಆರಂಭವಾಯಿತು.

**ಜನನ**

**1809:** ಇಂಗ್ಲೆಂಡ್‌ನ ಖ್ಯಾತ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್

**1809:** ಅಮೆರಿಕದ 16ನೇ ರಾಷ್ಟ್ರಪತಿ ಅಬ್ರಹಾಂ ಲಿಂಕನ್

**1920:** ಭಾರತೀಯ ಸ್ವಾತಂತ್ರ್ಯ ಹೋರಾಟಗಾರ ಪ್ರಭಾಕರ್ ಕಾರೆ

**1824:** ಮಹರ್ಷಿ ದಯಾನಂದ ಸರಸ್ವತಿ, ಆರ್ಯ ಸಂಘದ ಸ್ಥಾಪಕ

**1949:** ಗುಂಡಪ್ಪ ವಿಶ್ವನಾಥ್, ಭಾರತದ ಪ್ರಸಿದ್ಧ ಕ್ರಿಕೆಟ್ ಆಟಗಾರ

**ಮರಣ**

**1968:** ಪುಮ್ವಲಾ ಸುರಿ ಬಾಬು, ಭಾರತದ ನಟ-ಗಾಯಕ

**1980:** ರೇಮ್ಸ್ ಚಂದ್ರ ಮಮ್ದಾರ್, ಪ್ರಖ್ಯಾತ ಇತಿಹಾಸಕಾರ

**1981:** ಶಾಂತಾರಾಮ್ ಅಥಾವಣಳೆ ಮರವತಿಯ ಚಿತ್ರ ನಿರ್ದೇಶಕ-ನಿರೂಪಕ

**1976:** ಫ್ರಾಂಕ ಸ್ಟಾಗ್, ಐರಿಷ್ ರಿಪಬ್ಲಿಕನ್ ಹೋರಾಟಗಾರ

**1976:** ಸಾಲ್ ಮಿನಿಯೋ, ಅಮೆರಿಕನ್ ನಟ

# ಫೆ.14 ರಂದು ಹಾಸನದಲ್ಲಿ ಬೃಹತ್ ಬೈಕ್ ಜಾಥಾ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಮ್ಮು-ಕಾಶ್ಮೀರದ ಪುಲ್ವಾಮಾದಲ್ಲಿ 2019 ರಲ್ಲಿ 44 ಯೋಧರು ಹುತಾತ್ಮರಾಗಿದ್ದಕ್ಕೆ ಶ್ರದ್ಧಾಂಜಲಿ ಅರ್ಪಿಸಲು ಫೆ.14 ರಂದು ನಗರದಲ್ಲಿ ಬೃಹತ್ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಅರೆಸೇನಾ ಪಡೆ ಒಕ್ಕೂಟದ ಜಿಲ್ಲಾಧ್ಯಕ್ಷ ಪಿ.ವಿ.ನಾಗೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಡೇರಿ ವೃತ್ತದಿಂದ ಬೈಕ್ ರ್‍ಯಾಲಿ ಹೊರಡಲಿದೆ. ಅಲ್ಲಿಂದ ರಿಂಗ್ ರಸ್ತೆ, ಸುಬೇದಾರ್ ನಾಗೇಶ್ ವೃತ್ತ, ಸಾಲಗಾಮೆ ರಸ್ತೆ, ಸಹ್ಯಾದ್ರಿ ಸರ್ಕಲ್, ಹೇಮಾವತಿ ಪ್ರತಿಮೆ, ಎನ್.ಆರ್.ವೃತ್ತ, ಬಿಎಂ ರಸ್ತೆ, ರೈಲ್ವೆ ನಿಲ್ದಾಣ ಮುಂಭಾಗ, ಡೇರಿ ವೃತ್ತದ ಮೂಲಕ ಕೆಂಚಟ್ಟಹಳ್ಳಿಯಲ್ಲಿರುವ ಅರೆಸೇನಾ ಪಡೆಯ ಭವನದ ಬಳಿ ಕೊನೆಗೊಳ್ಳಲಿದೆ.

ಅಲ್ಲಿ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ನಮ್ಮ ಪಡೆಯ 44 ಯೋಧರು ಹುತಾತ್ಮರಾಗಿ ಫೆ.14ಕ್ಕೆ 7 ವರ್ಷ ತುಂಬಲಿದೆ. ಹಾಗೆಯೇ ರಾಜ್ಯದಲ್ಲೇ ಮೊದಲ ಬಾರಿಗೆ ಅರೆಸೇನಾ ಭವನ ನಿರ್ಮಾಣಗೊಂಡು 1 ವರ್ಷ ಕಳೆದಿದೆ. ಇದರ ಸ್ಮರಣಾರ್ಥ ಮತ್ತು ನಮ್ಮ ಮುಂದಿನ ಕಾರ್ಯ ಚಟುವಟಿಕೆ ಏನು ಎಂಬುದನ್ನು ಜನರಿಗೆ ತಿಳಿಸುವುದೂ ಈ ಜಾಥಾದ ಉದ್ದೇಶ. ಸುಮಾರು 500-600 ಮಂದಿ ಭಾಗಿಯಾಗುವ ನಿರೀಕ್ಷೆ ಇದೆ ಎಂದರು.

ನಮ್ಮ ದೇಶ ಹಾಗೂ ಸೈನಿಕರ ಮೇಲೆ ಅಭಿಮಾನ ಹೊಂದಿರುವ ಎಲ್ಲರೂ ಜಾಥಾದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದ ಅವರು, ಇತರೆ ಸಂಘಟನೆಗಳವರೂ ಬೆಂಬಲ ನೀಡಬೇಕು ಎಂದು ಮನವಿ ಮಾಡಲಾಗಿದೆ ಎಂದರು.

ಉಪಾಧ್ಯಕ್ಷ ಎಂ.ಜಿ.ರಮೇಶ್ ಮಾತನಾಡಿ, ವಿವಿಧ ಸೌಲಭ್ಯಗಳಿಗಾಗಿ ಈಗಲೂ ನಾವು ಹೋರಾಟ ಮಾಡಬೇಕಿದೆ. ಸಿಆರ್‌ಪಿಎಫ್ ಯೋಧರು ಹಾಗೂ ಇತರೆ ಯೋಧರಿಗೆ ಸೌಲಭ್ಯ ನೀಡಿಕೆಯಲ್ಲಿ ತಾರತಮ್ಯ ಮಾಡುವುದನ್ನು ನಿಲ್ಲಿಸಬೇಕು. ಅವರಂತೆಯೇ ನಮಗೂ ಸಮಾನ ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿದರು. ನಮಗೂ ಸೈನಿಕ್ ಬೋರ್ಡ್ ರಚಿಸುವ ಪ್ರಸ್ತಾಪ ರಾಜ್ಯ ಸರ್ಕಾರದ ಮುಂದೆ ಇದ್ದು, ಶೀಘ್ರವೇ ಸಾಕಾರವಾಗುವ ವಿಶ್ವಾಸ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ನಾರಾಯಣಪ್ಪ, ನಾಗಪ್ಪ, ಕಾರ್ಯದರ್ಶಿ ಹೆಚ್.ಆರ್.ವಿಜಯಕುಮಾರ್, ಹೆಚ್.ಕುಮಾರ್ ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248